**ಕಾರ್ಯಕ್ರಮ ಪಟ್ಟಿ ವಿಷಯ ಸಂಖ್ಯೆ: 6**

**ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು.**
**2021-2022ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಳಿ ವರದಿ**

**ಮಾನ್ಯ ಸಹಕಾರಿ ಬಂಧುಗಳೇ,**

23ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ತಮ್ಮೆಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಸ್ವಾಗತ ಬಯಸುತ್ತೇನೆ. ತಮ್ಮ ಮುಂದೆ ಬ್ಯಾಂಕಿನ ಲೆಕ್ಕಪರಿಶೋಧಕರ 2021-2022ನೇ ಸಾಲಿನ ಲಾಭ-ನಷ್ಟ, ಆಸ್ತಿ-ಜವಾಬ್ದಾರಿ ತ:ಖ್ತೆಗಳು ಹಾಗೂ ವರದಿಯನ್ನು ಮಂಡಿಸಿರುತ್ತೇವೆ. ವಿಷಯ ಸೂಚಿಯಂತೆ ಚರ್ಚಿಸಿ ತಮ್ಮ ಸಲಹೆ, ಸೂಚನೆ ಮತ್ತು ಮಾರ್ಗದರ್ಶನಗಳ ಮೂಲಕ ಅಂಗೀಕಾರ ನೀಡಬೇಕಾಗಿ ಕೋರುತ್ತೇವೆ.

22 ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಬ್ಯಾಂಕ್, ತಮ್ಮೆಲ್ಲರ ಸಹಕಾರದಿಂದ ಪ್ರತಿ ವರ್ಷ ಪ್ರಗತಿಯ ಹಾದಿಯಲ್ಲಿ ಮುನ್ನೆಡೆಯುತ್ತಿದೆ. ಬ್ಯಾಂಕಿನ ಒಟ್ಟಾರೆ ವಾರ್ಷಿಕ ವ್ಯವಹಾರವು 1037.75 ಕೋಟಿ ರೂಪಾಯಿಗಳಿಗೂ ಅಧಿಕವಾಗಿದ್ದು, ಕಳೆದ 10 ವರ್ಷಗಳಿಂದಲೂ ಆಡಿಟ್ ವರ್ಗೀಕರಣದಲ್ಲಿ 'ಎ' ಶ್ರೇಣಿಯನ್ನು ಮುಂದುವರಿಸಿಕೊಂಡು ಬಂದಿರುತ್ತದೆ. ಬ್ಯಾಂಕಿನ ಹಿತದೃಷ್ಟಿಯಿಂದ ಎಲ್ಲಾ ಶಾಖೆಗಳಿಗೂ ಸಿಸಿ ಟಿವಿ ಕ್ಯಾಮರ ಅಳವಡಿಸಲಾಗಿರುತ್ತದೆ. ಸದಸ್ಯರ ಮತ್ತು ಗ್ರಾಹಕರ ಅನುಕೂಲಕ್ಕಾಗಿ ಆರ್.ಟಿ.ಜಿ.ಎಸ್/ಎನ್.ಈ.ಎಫ್.ಟಿ ಸೌಲಭ್ಯವನ್ನು ಹಾಗೂ ಎಸ್.ಎಂ.ಎಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಿಟಿಸಿವಿಲ್ ಕೋರ್ಟ್ ಶಾಖೆಯ ಆವರಣದಲ್ಲಿ ಬ್ಯಾಂಕಿನ ಸದಸ್ಯರಿಗೆ, ವಕೀಲರಿಗೆ ಹಾಗೂ ಗ್ರಾಹಕರಿಗೆ ಎಟಿಎಂ ಸೌಲಭ್ಯವನ್ನು ಕಲ್ಪಿಸಲಾಗಿದೆ. ಜೊತೆಗೆ ಶ್ರೀಘ್ರದಲ್ಲೇ ಸದಸ್ಯರ ಅನುಕೂಲಕ್ಕಾಗಿ ಐ.ಎಂ.ಪಿ.ಎಸ್ ಸೌಲಭ್ಯವನ್ನು ಕಲ್ಪಿಸಲಾಗುವುದು. ಬ್ಯಾಂಕಿನ ಒಟ್ಟಾರೆ ಚಿತ್ರಣ ಆಶಾದಾಯಕವಾಗಿದ್ದು ಸದಸ್ಯರಿಗೆ ಹಾಗೂ ಗ್ರಾಹಕರಿಗೆ ತೃಪ್ತಿದಾಯಕ ಸೇವೆಯನ್ನು ನೀಡುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿರುತ್ತೇವೆ.

ವರದಿ ಸಾಲಿನ ಪಾವತಿಯಾದ ಷೇರು ಬಂಡವಾಳ ರೂ.698.36 ಲಕ್ಷ ಗಳಿದ್ದು, ಆಪದ್ಧನ ಮತ್ತು ಇತರೆ ನಿಧಿಗಳು ರೂ.1254.50 ಲಕ್ಷಗಳಿದ್ದು ಠೇವಣಿಗಳು ರೂ.15668.48 ಲಕ್ಷ ಗಳಿದ್ದು, ಹೂಡಿಕೆಗಳು ರೂ.7488.00 ಲಕ್ಷಗಳಿದ್ದು, ಸಾಲ ಮತ್ತು ಮುಂಗಡಗಳು ರೂ.9378.84 ಲಕ್ಷಗಳಿದ್ದು, ದುಡಿಯುವ ಬಂಡವಾಳ ರೂ.17832.31 ಲಕ್ಷ ಗಳಿದ್ದು, ನಿವ್ವಳ ಲಾಭವು 353.97 ಲಕ್ಷ ಗಳಿದ್ದು, ನಮ್ಮ ಬ್ಯಾಂಕಿನಲ್ಲಿ ಠೇವಣಿ ಮಾಡಿರುವ ಪ್ರತಿಯೊಬ್ಬ ಠೇವಣಿದಾರರಿಗೆ ಒಟ್ಟು ರೂ.5.00 ಲಕ್ಷದ ಮೊತ್ತದವರೆಗೆ ಡಿಪಾಸಿಟ್ ಇನ್ಸೂರೆನ್ಸ್ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ ಮೂಲಕ ವಿಮೆ ಭದ್ರತೆ ಪಡೆಯಲಾಗಿರುತ್ತದೆ. ಹಿರಿಯ ನಾಗರೀಕರಿಗೆ ಠೇವಣಿ ಬಡ್ಡಿ ದರದಲ್ಲಿ ಶೇ.0.50 ರಷ್ಟು ಹೆಚ್ಚಿಗೆ ನೀಡುತ್ತಿದ್ದೇವೆ.

ಈಗಾಗಲೇ ಆರ್.ಬಿ.ಐ ಮಾನದಂಡದಂತೆ ನಮ್ಮ ಬ್ಯಾಂಕು ಈ ಸಾಲಿನಿಂದ ಟೈರ್ 1 ಬ್ಯಾಂಕಿನಿಂದ ಟೈರ್ 2 ಬ್ಯಾಂಕಾಗಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಜೊತೆಗೆ ಆರ್.ಬಿ.ಐ ಪರಿವಿಕ್ಷಣಾ ವರದಿಯ ಆದಾರದ ಮೇಲೆ ಆರ್.ಬಿ.ಐ ನೀಡುವ ಕ್ಯಾಮಲ್ ರೇಟಿಂಗ್‌ನಲ್ಲಿ ಈ ಬಾರಿಯೂ ಕೂಡ ಬ್ಯಾಂಕಿಗೆ "ಎ" ರೇಟಿಂಗ್ ಬಂದಿರುವುದನ್ನು ತಮಗೆ ತಿಳಿಸಲು ಹರ್ಷ ಪಡಸುತ್ತೇವೆ. ಗೃಹ ಸಾಲದ ಮಿತಿಯು ರೂ.1.40ಕೋಟಿಗೆ, ಅಡಮಾನ ಸಾಲದ ಮಿತಿಯು ರೂ.2 ಕೋಟಿಗೆ, ವಾಹನ ಸಾಲದ ಮಿತಿಯು ರೂ.20 ಲಕ್ಷಕ್ಕೆ, ಹಾಗೂ ಗ್ರೂಪ್ ಹೌಸಿಂಗ್ ಸಾಲದ ಮಿತಿಯು ರೂ.3.5 ಕೋಟಿಗೆ ಹೆಚ್ಚಳ ಮಾಡಿದ್ದು ತಮಗೆ ತಿಳಿಸಲು ಹರ್ಷ ಪಡುತ್ತೇವೆ. ಸದಸ್ಯರ ಮತ್ತು ಗ್ರಾಹಕರ ಅನುಕೂಲಕ್ಕಾಗಿ ಲಾಕರ್ ಸೌಲಭ್ಯ, ದಿನನಿತ್ಯ ಠೇವಣಿ(ಪಿಗ್ಮಿ) ಸೌಲಭ್ಯಾ ಒದಗಿಸಲಾಗಿದೆ.

2021-2022ರ ವರ್ಷಾಂತ್ಯಕ್ಕೆ ನಿವ್ವಳ ಅನುತ್ಪಾದಕ ಆಸ್ತಿಗಳ ಪ್ರಮಾಣವನ್ನು **ಶೇ.4.62** ಆಗಿರುತ್ತದೆ. ಮುಂದಿನ ಸಾಲುಗಳಲ್ಲಿ ನಿವ್ವಳ ಎನ್.ಪಿ.ಎ ಶೂನ್ಯಕ್ಕೆ ತರುವ ಆಶಾಭಾವನೆ ಹೊಂದಿದ್ದೇವೆ. ಬ್ಯಾಂಕಿನ ಒಟ್ಟಾರೆ ಆದಾಯ ರೂ.1576.22 ಲಕ್ಷಗಳಿದ್ದು ಈ ಪೈಕಿ ಒಟ್ಟು ಎಲ್ಲಾ ರೀತಿಯ ಖರ್ಚು ರೂ.1222.25 ಲಕ್ಷ, ಬಾಕಿ ಜಾತಾ ನಿವ್ವಳ ರೂ.353.97 ಲಕ್ಷ ಲಾಭ ಗಳಿಸಿದೆ. ಸದರಿ ನಿವ್ವಳ ಲಾಭವನ್ನು ಸಹಕಾರ ಕಾಯಿದೆ, ಬ್ಯಾಂಕಿನ ಬೈಲಾಗಳನ್ನು

ಅನುಸರಿಸಿ ಹಂಚಿಕೆ ಮಾಡಲು ತಮ್ಮ ಅನುಮೋದನೆಗಾಗಿ ಮಂಡಿಸಿದ್ದೇವೆ. ಸದರಿ ಶಿಫಾರಸ್ಸಿನಲ್ಲಿ ಬ್ಯಾಂಕಿನ ಪ್ರತಿ ಷೇರಿಗೆ ಶೇ.15 ರಂತೆ ಲಾಭಾಂಶ ಘೋಷಣೆಗೆ ಅವಕಾಶ ಮಾಡಲಾಗಿದೆ.

**ಗುರಿ:**

ಬ್ಯಾಂಕಿನ ಪ್ರಗತಿಗೆ ಗುರಿಯನ್ನು ಹಮ್ಮಿಕೊಳಲಾಗಿದೆ. ವಾರ್ಷಿಕ ಶೇಕಡ 10ರಂತೆ ಠೇವಣಿಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಶೇಕಡ 15ಕ್ಕೆ ಕಡಿಮೆ ಇಲ್ಲದಂತೆ ಲಾಭಾಂಶ ಮುಂದಿನ ವರ್ಷಗಳಲ್ಲಿ ನೀಡಲು ಉದ್ದೇಶಿಸಲಾಗಿದೆ. ಸದಸ್ಯರಿಗೆ ಹೆಚ್ಚಿನ ಹಾಗೂ ನಿರಂತರ ಸೇವೆಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಗುರಿಯನ್ನು ಹೊಂದಿದ್ದು, ಇದರ ಸಾಕಾರಕ್ಕೆ ತಮ್ಮ ಸಹಕಾರವನ್ನು ನಿರೀಕ್ಷಿಸುತ್ತೇವೆ. ಪ್ರಸಕ್ತ ವರ್ಷದಲ್ಲಿ ಬ್ಯಾಂಕಿನ ವತಿಯಿಂದ ಕೌಟುಂಬಿಕ ನ್ಯಾಯಾಲಯ ಮತ್ತು ಮೇಯೋಹಾಲ್ ವಿಭಾಗದಲ್ಲಿ ಶಾಖೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

**ಧನ್ಯವಾದ ಸಮರ್ಪಣೆ:**

ನ್ಯಾಯಮಿತ್ರ ಸಹಕಾರಿ ಬ್ಯಾಂಕಿಗೆ ಅಗತ್ಯವಾದ ಸ್ಥಳಾವಕಾಶವನ್ನು ಒದಗಿಸಿಕೊಟ್ಟಿರುವ ಉಚ್ಚ ನ್ಯಾಯಾಲಯದ ಸರ್ವರಿಗೂ ಮತ್ತು ಇದಕ್ಕೆ ಸಹಕರಿಸಿದ ವಕೀಲರ ಸಂಘ ಮತ್ತು ಕಟ್ಟಡ ಸಮಿತಿಯ ಪಧಾಧಿಕಾರಿಗಳಿಗೆ ನಮ್ಮ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಕ.ರಾ. ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರಿಗೂ, ಲೆಕ್ಕ ಪರಿಶೋಧನೆ ಕಾರ್ಯವನ್ನು ಸಕಾಲದಲ್ಲಿ ನಡೆಸಿಕೊಟ್ಟ ಮೇ: ಎಸ್.ಎಸ್.ಬಿ ಅಂಡ್ ಅಸೋಸಿಯೆಟ್ಸ್ ಬೆಂಗಳೂರು ಇವರಿಗೂ, ಬ್ಯಾಂಕಿನ ದಿನವಹಿ ಲೆಕ್ಕಪರಿಶೋಧನೆ ನಡಿಸಿ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುವ ಮೇ.ಚವಾಣ್ ಅಸೋಸಿಯೆಟ್ಸ್ ಹಾಗೂ ಮೇ.ಅಳವಂಡಿ ಅಸೋಸಿಯೆಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರಿಗೂ, ಬ್ಯಾಂಕಿನ ಆದಾಯತೆರಿಗೆ, ಟಿ.ಡಿ.ಎಸ್ ರಿಟರ್ನ್ ನಡೆಸಿ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಮೇ.ವಾಸನ್ ಅಸೋಸಿಯೆಟ್ಸ್, ಬೆಂಗಳೂರು ಇವರಿಗೂ, ಬ್ಯಾಂಕಿನ ಗಣಕಯಂತ್ರ ಹಾಗೂ ಇನ್ನಿತರ ಬಗ್ಗೆ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡುತ್ತಿರುವ ಮೇ.ಮುರಳಿ ಅಂಡ್ ವೆಂಕಟ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರಿಗೂ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನವರಿಗೂ, ಭಾರತೀಯ ರಿಸರ್ವ್ ಬ್ಯಾಂಕಿನವರಿಗೂ, ಸದಸ್ಯರಿಗೂ, ಠೇವಣಿದಾರರಿಗೂ, ಗ್ರಾಹಕರಿಗೂ ಹಾಗೂ ಸಾಲಗಾರರಿಗೂ ಈ ಮೂಲಕ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಬ್ಯಾಂಕಿನ ಸಮಗ್ರ ಮುನ್ನಡೆಯಲ್ಲಿ ಸಹಕರಿಸುತ್ತಿರುವ ಎಲ್ಲಾ ವಕೀಲರ ಸಂಸ್ಥೆಗಳ ಪದಾಧಿಕಾರಿಗಳಗೂ ಬ್ಯಾಂಕಿನ ಬೆಳವಣಿಗೆಗೆ ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ ಅಭಿನಂದಿಸುತ್ತೇವೆ. ಒಟ್ಟಾರೆ ಬ್ಯಾಂಕಿನ ಕಾರ್ಯ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಹಾಗೂ ಸಹಕರಿಸುತ್ತಿರುವ ಸಮಸ್ತರಿಗೂ ಆಡಳಿತ ಮಂಡಳಿ ಪರವಾಗಿ ಹಾಗೂ ವೈಯಕ್ತಿಕವಾಗಿ ಧನ್ಯವಾದಗಳನ್ನು ಈ ಮೂಲಕ ಅರ್ಪಿಸುತ್ತೇವೆ.

ವಂದನೆಗಳೊಂದಿಗೆ,

ಸಹಿ/-

(ರಮೇಶ್ ಬಾಬು)

ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು